ಉ) ತಾಲ್ಲೂಕುವಾರು ಮಾಹಿತಿ ಲಭ್ಯವಿರುವುದಿಲ್ಲ.

ಯೋಜನಾ ಆಯೋಗದ ಒಪ್ಪಿಗೆಯಂತೆ 1991-92ನೇ ಸಾಲಿಗೆ 50.00 ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಈ ಪೈಕಿ ಸೆಪ್ಟೆಂಬರ್ ಅಂತ್ಯದವರೆಗೆ 25.00 ಕೋಟಿ ರೂ.ಗಳನ್ನು ಖರ್ಚು ಮಾಡಬಹುದಾಗಿದೆ. ಇಲಾಖಾವಾರು ವಿವರಗಳು ಈ ಕೆಳಗಿನ ಖರ್ಚು ಮಾಡಬಹುದಾಗಿದೆ :

ಕ್ರಮ ಸಂಖ್ಯೆ	ಕಾರ್ಯಕ್ರಮ	1991-92ರ ಮೊದಲ ತಿಂಗಳಿಗೆ ತಾತ್ಕಾಲಿಕವಾಗಿ ಮಾಡಿದ ಹಂಚಿಕೆ (ಒದಗಿಸಿದ ಮೊತ್ತದ ಶೇ. 50ರಷ್ಟು)
1.	ರಸ್ತೆ ಮತ್ತು ಸೇತುವೆಗಳು	400.00
2.	ದೊಡ್ಡ ಮತ್ತು ಮಧ್ಯಮ ಪ್ರಮಾಣದ ನೀರಾವರಿ	140.00
3.	ಸಣ್ಣ ನೀರಾವರಿ	210.00
4.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	200.00
5.	ಶಿಕ್ಷಣ	400.00
6.	ನಗರ ನೀರು ಪೂರೈಕೆ ಮತ್ತು ಒಡಚರಂಡಿ	400.00
7.	ಗ್ರಾಮೀಣ ನೀರು ಪೂರೈಕೆ	
8.	ವಿದ್ಯುಚ್ಛಕ್ತಿ	250.00
9.	ಸಹಕಾರ	33.00
10.	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಜಿಲ್ಲಾ ಪರಿಷತ್ ಕಾಮಗಾರಿಗಳು)	367.00
11.	ಸಿಬ್ಬಂದಿ ಮತ್ತು ಇತರ ವೆಚ್ಚಗಳು	100.00
	ಒಟ್ಟು	2500.00

ಲೋಕಸಭಾ ಚುನಾವಣೆಯ ಸಮಯದಲ್ಲಿ ಭಟ್ಕಳದಲ್ಲಿ ಗುಂಪು ಘರ್ಷಣೆ

2605 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಲೋಕಸಭಾ ಚುನಾವಣೆಯ ಸಮಯದಲ್ಲಿ ಭಟ್ಕಳದಲ್ಲಿ ಗುಂಪು ಘರ್ಷಣೆಯು ನಡೆದಿದ್ದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ ಈ ಗಲಭೆಯಲ್ಲಿ ಪೋಲಿಸರ ಗೋಲಿಬಾರಿನಿಂದ ಸತ್ತವರು, ಗಾಯಗೊಂಡವರು, ಸಾರ್ವಜನಿಕ ಆಸ್ತಿಪಾಸ್ತಿಗಳ ನಷ್ಟ, ವಾಹನಗಳಿಗೆ ಬೆಂಕಿ ಮುಂತಾದುವುಗಳ ಬಗ್ಗೆ ಸರ್ಕಾರ ವಿವರಗಳನ್ನು ಸಂಗ್ರಹಿಸಿದೆಯೇ ?

ಇ) ಸಂಗ್ರಹಿಸಿದ್ದಲ್ಲಿ ಅದರ ವಿವರಗಳೇನು ?

ಈ) ಈ ಗಲಭೆಯ ಸಂಧರ್ಭದಲ್ಲಿ ಎಷ್ಟು ಮೊತ್ತದ ಆಸ್ತಿಪಾಸ್ತಿಗಳು ನಷ್ಟವಾಗಿದೆ ?

ಉ) ಸರ್ಕಾರ ಇದುವರೆಗೂ ಎಷ್ಟು ಮೊತ್ತದ ಪಾವತಿಸಿ ನೀಡಿದೆ (ಪರಿಹಾರದ ಮೊತ್ತ ಹಾಗೂ ಪಡೆದುಕೊಂಡವರ ಬಗ್ಗೆ ವಿವರಗಳನ್ನು ನೀಡುವುದು)

ಊ) ಈ ಗಲಭೆಯ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಮತ್ತು ಆಸ್ತಿಪಾಸ್ತಿ ಕಳೆದುಕೊಂಡವರಿಗೆ ಈಗಿನ ಮಾರುಕಟ್ಟೆ ಬೆಲೆಯ ಪ್ರಕಾರವೇ ಪರಿಹಾರ ನೀಡಬೇಕೆಂದು ಯಾರಿಂದಲಾದರೂ ಒತ್ತಾಯ ಬಂದಿತ್ತೇ? ಬಂದಿದ್ದಲ್ಲಿ ಯಾರಿಂದ?

ಋ) ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಹೌದು.

ಆ) ಹೌದು.

ಇ) ಸಂಗ್ರಹಿಸಿದ ವಿವರ

ನಷ್ಟ-ವಾಹನಗಳಿಗೆ ರೂ.	7,02,500-00
ಮನೆಗಳಿಗೆ	15,92,200-00
ಹೋಟೆಲುಗಳಿಗೆ	3,700-00
ಅಂಗಡಿಗಳಿಗೆ	22,22,394-00
ದರ್ಗಾ ಮತ್ತು ಮಸೀದಿಗಳಿಗೆ	18,000-00
ಇತರೆ	4,13,615-00
ಒಟ್ಟ	49,52,409-00
ಸತ್ತವರ ಸಂಖ್ಯೆ	3 (ಹಿಂದು-1, ಮು.2)
ಗಾಯಗೊಂಡವರು	
ಪೋಲೀಸರು	12
ಇತರರು	4 (ಹಿಂದು 2, ಮುಸ್ಲಿಂ-2)
ಈ) ಆಸ್ತಿಪಾಸ್ತಿ ನಷ್ಟದ ಒಟ್ಟ	49,52,409-00
1. ಸತ್ತವರ ಬಗ್ಗೆ	1,50,000-00
2. ಇತರೆ	1,85,875-00

ಊ) ಬಂದಿದೆ. ಭಟ್ಕಳ್ ಮಸೀಲಿಸ್ ಇಸ್ಲಾ ಓ ತನ್ಜೀರ, ಸಂಸ್ಥೆಯ ಮಹಾ ಕಾರ್ಯದರ್ಶಿಯವರಿಂದ ಮನವಿ ಬಂದಿದೆ.

ಋ) ಮನವಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಕೊಡಗು ಜಿಲ್ಲೆಯಲ್ಲಿ ಕಳ್ಳ ಸಾಗಾಣಿಕೆ

2656 - ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ಹಾಗೂ ಕೇರಳ ಗಡಿಗಳಲ್ಲಿ ಕಳ್ಳ ಸಾಗಾಣಿಕೆ ಹೆಚ್ಚಾಗುತ್ತಿರುವುದು ಹಾಗೂ ಅವ್ಯವಹಾರ ನಡೆಯುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಅವುಗಳನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?